## ನೋಡಿದಾಗೆಲ್ಲಾ ಎದ್ದು ನಿಂತ!

ನನ್ನ ಮಗ ಓದುವದರಲ್ಲಿ ಸ್ವಲ್ಪ ಹಿಂದೆ, ಆಟದಲ್ಲಿ ಮುಂದೆ... ಅದರಲ್ಲೂ ಈಗ ಆನ್‌ಲೈನ್ ಕ್ಲಾಸುಗಳು ನಡೆಯುತ್ತಿರುವುದರಿಂದ ಅವನನ್ನು ಸ್ವಲ್ಪ ಎಚ್ಚರಿಸಬೇಕೆಂದುಕೊಂಡು ಒಂದು ದಿನ, 'ನೋಡು ಗಣೇಶ, ನೀನು ಚೆನ್ನಾಗಿ ಓದಬೇಕು, ಜೀವನದಲ್ಲಿ ಗಟ್ಟಿಯಾಗಿ ಎದ್ದು ನಿಲ್ಲಬೇಕು. ಅಂದರೆನೇ ಮರ್ಯಾದೆ' ಎಂದು ಹಲವಾರು ಉದಾಹರಣೆ ಕೊಟ್ಟು ಹೇಳಿದೆ. ಕೆಲ ದಿನಗಳ ನಂತರ ನನ್ನನ್ನು ನೋಡಿದಾಗಲೆಲ್ಲಾ ಆತ ಎದ್ದು ನಿಲ್ಲುವುದನ್ನು ಕಂಡು ನನಗೆ ರೇಗಿ ಹೋಯಿತು. ಕೋಪದಿಂದ, 'ಯಾಕೆ ಹೀಗೆ ಮಾಡುತ್ತಿದ್ದಿಯಾ?' ಎಂದು ಗದರಿಸಿ ಕೇಳಿದೆ, 'ಅಪ್ಪ, ನೀವೇ ಹೇಳಿದರಲ್ಲ, ಗಟ್ಟಿಯಾಗಿ ಎದ್ದು ನಿಲ್ಲಬೇಕು ಅಂತ' ಎಂದು ಹೇಳಿದಾಗ ನನಗೆ ಕೋಪ ಮಾಯವಾಗಿ ನಗೆಯುಕ್ಕಿತು.

**ಹರವೆಸಂಗಣ್ಣ ಪ್ರಕಾಶ್**





ಕಲೆ: ಗಣೇಶ ಆಚಾರ್ಯ

## ಟ್ರಾಫಿಕ್ ಜಾಮ್

ನಮ್ಮ ತರಬೇತಿ ಕೇಂದ್ರದಲ್ಲಿ ಲಾಕ್‌ಡೌನ್ ಸಮಯದಲ್ಲಿ ಆನ್‌ಲೈನ್ ತರಗತಿಗಳಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಅದೊಂದು ದಿನ ಮಧ್ಯಾಹ್ನ ನನ್ನ ಸಹೋದ್ಯೋಗಿಯೊಬ್ಬರು ಆನ್‌ಲೈನ್ ಕ್ಲಾಸ್ ತೆಗೆದುಕೊಂಡಿದ್ದರು. ನಾನು ಅವರ ಪಕ್ಕ ಕುಳಿತು ಬೇರೊಂದು ಕೆಲಸ ಮಾಡುತ್ತಿದ್ದೆ. ಕ್ಲಾಸ್ ಮುಗಿಯುವ ಹಂತಕ್ಕೆ ಬಂದಾಗ ಒಬ್ಬ ವಿದ್ಯಾರ್ಥಿ ಬಂದು ಸೇರಿಕೊಂಡ. 'ಕ್ಲಾಸ್‌ಗೆ ಬರಲು ಯಾಕೆ ತಡವಾಯಿತು?' ಅಂತ ಕೇಳಿದ್ದಕ್ಕೆ, 'ಟ್ರಾಫಿಕ್ ಇತ್ತು ಸರ್' ಎಂದ. 'ಆದರೆ ಇದು ಆನ್‌ಲೈನ್ ಕ್ಲಾಸ್ ಅಲ್ವಾ?' ಬಿಡದೇ ಕೇಳಿದಾಗ, 'ನೆಟ್‌ವರ್ಕ್ ಟ್ರಾಫಿಕ್ ಇತ್ತು ಸರ್' ಎಂದ. ಒಂದು ಕ್ಷಣ ನಮ್ಮ ಮಿತ್ರರಿಗೆ ಏನು ಉತ್ತರ ಕೊಡಬೇಕೆಂದೇ ಗೊತ್ತಾಗಲಿಲ್ಲ...

**ಭೋಜರಾಜ ಸೊಪ್ಪಿಮಠ**